**ಪಾಠ 3** **ಅಕ್ಟೋಬರ್ 13–19**

# "ಅವರೆಲ್ಲರೂ ಐಕ್ಯತೆಯಿಂದಿರಬೇಕೆಂದು"



## ಸಬ್ಬತ್ತು ಮಧ್ಯಾಹ್ನ

ಈ ವಾರದ ಅಭ್ಯಾಸಕ್ಕಾಗಿ: ಯೋಹಾನ 17:1–26; 1 ಯೋಹಾನ 5:19; ಯೋಹಾನ 13:18–30; ಯೋಹಾನ 5:20–23; ಮಾರ್ಕನು 9:38–45; ಪ್ರಕಟನೆ 18:4, 1ಯೋಹಾನ 2:3–6.

**ಸ್ಮರಣ ವಾಕ್ಯ: " ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಬೇಕೆಂತಲೂ ತಂದೆಯೇ, ನೀನು ನನ್ನಲ್ಲೆಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರು ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ.'**

ಯೇಸುವನ್ನು ಹಿಡಿದುಕೊಟ್ಟು ಮರಣಕ್ಕೆ ಒಪ್ಪಿಸುವ ಕಾಲ ಸಮೀಪಿಸುತ್ತಿರುವಾಗ ಯೇಸುಸ್ವಾಮಿಯ ಮನಸ್ಸಿನಲ್ಲಿ ಇದ್ದಂತಹ ಆಲೋಚನೆಗಳ ಬಗ್ಗೆ ಯೋಹಾನನ ಸುವಾರ್ತೆ ಬೆಳಕು ಚೆಲ್ಲುತ್ತದೆ. ಐದು ನಿಶ್ಚಿತ ಅಧ್ಯಾಯಗಳಲ್ಲಿ (ಯೋಹಾನ 13–17) ಆತನ ಬೋಧನೆಯ ಅಂತ್ಯ ಭಾಗ ಮತ್ತು ಯೇಸು ತನ್ನ ಶಿಷ್ಯರಿಗಾಗಿ ಮಾಡಿದ "ಪ್ರಧಾನ ಯಾಜಕ ಪ್ರಾರ್ಥನೆ" (ಯೋಹಾನ 17)ಗಳು

ಇವೆ. “ಆತನಿಗೆ ಅದೊಂದು ಯೋಗ್ಯ ಪದವಿ, ಈ ಪ್ರಾರ್ಥನೆಯಲ್ಲಿ ತನ್ನನ್ನ ತಾನು ಯಜ್ಞವಾಗಿ ಅರ್ಪಣೆ ಮಾಡುತ್ತಿದ್ದಾನೆ, ಇಲ್ಲಿ ತಾನು ಒಂದೇ ಬಾರಿ
ಯಾಜಕ ಮತ್ತು ಯಜ್ಞವಾಗಿ ಸಂಬೋಧಿಸಲ್ಪಟ್ಟಿದ್ದಾನೆ. ಅಷ್ಟೇ ಅಲ್ಲದೇ ಯಾರ ಪರವಾಗಿ ಅರ್ಪಣೆಯಾಗುತ್ತಿರುವನೋ ಅವರಿಗಾಗಿ ಮನವಿಯೂ ಅದಾಗಿದೆ ಆ ಮೇಲಿನ ಕೋಣೆಯಲ್ಲಿ ಕೂಡಿದ ಶಿಷ್ಯರಿಗಾಗಿಯೂ ಮತ್ತು ಶಿಷುರ ಸಾಕ್ಷಿಯಾಗಿ ಸ್ವಾಮಿಯನ್ನು ನಂಬುವ ವಿಶ್ವಾಸಿಗಳಿಗಾಗಿಯೂ” ಎಫ್.ಎಫ್. ಬ್ರೂಸ್, ದಿ ಗಾಸ್ಪಲ್ ಆಫ್ ಜಾನ್(ಗ್ರ್ಯಾಂಡ್ ರಾಪಿಟ್ಸ್: ಈರ್ಡ್‌ಮ್ಯನ್ಸ್, 1983) ಪು. 328.

ಯೇಸು ಮಾಡಿದ ಪ್ರಾರ್ಥನೆಯ ಪ್ರಧಾನ ವಿಷಯ ಆತನ ಶಿಷ್ಯರು ಮತ್ತು ಅನಂತರ ಆತನ ಶಿಷ್ಯರಾಗುವವರು ಯಾವಾಗಲೂ ಐಕ್ಯತೆಯಿಂದ ಇರಬೇಕೆಂಬುದೇ, ಆತನ ಪ್ರಾರ್ಥನೆಯ ಕೇಂದ್ರ ವಿಷಯವೇ ಇದಾಗಿತ್ತು: “ಅವರಿಗಾಗಿ ನಾನು ಪ್ರಾರ್ಥಿಸುತ್ತೇನೆ, ಜಗತ್ತಿಗಾಗಿ ನಾನು ಪ್ರಾರ್ಥಿಸುವುದಿಲ್ಲ ಆದರೆ ಯಾರನ್ನು ನನಗೆ ಕೊಟ್ಟಿರುವಿಯೋ ಅವರು ನಿನ್ನವರು, ನನ್ನವರೆಲ್ಲರೂ ನಿನ್ನವರೇ ಮತ್ತು ನಿನ್ನವರು ನನ್ನವರೇ, ಅವರ ಮೂಲಕವೇ ನನಗೆ ಮಹಿಮೆ” (ಯೋಹಾನ 17:9,10).

ಈ ಪ್ರಾರ್ಥನೆಗೆ ಎಚ್ಚರಿಕೆಯಿಂದ ಗಮನ ಕೊಡದೇ ಸಭೆಯ ಐಕ್ಯತೆ ಕ್ರಿಸ್ತನಲ್ಲಿ ನಾವು ಒಂದಾಗಿರುವುದು ಎಂಬ ವಿಷಯಗಳ ಬಗೆಗಿನ ಚರ್ಚೆ ಅಪೂರ್ಣವಾಗಿರುತ್ತದೆ. ಯೇಸು ಯಾವುದಕ್ಕಾಗಿ ಪ್ರಾರ್ಥಿಸಿದನು, ಯಾರಿಗಾಗಿ ತಾನು ಪ್ರಾರ್ಥಿಸಿದನು, ಮತ್ತು ಇಂದು ಈ ಪ್ರಾರ್ಥನೆಯಿಂದ ನಾವು ಕಲಿಯುವ ಪಾಠ ಯಾವುದು?

**ಬಾನುವಾರ** **ಅಕ್ಟೋಬರ್ 14**

**ಯೇಸು ತನಗಾಗಿ ಪ್ರಾರ್ಥಿಸಿದನು**

ಮಹಾಯಾಜಕನ ಪ್ರಾರ್ಥನೆಯಲ್ಲಿ ಮೂರು ಭಾಗಗಳಿವೆ. ಮೊದಲನೆಯದು, ಯೇಸು ತನಗಾಗಿ ಮಾಡಿದ ಪ್ರಾರ್ಥನೆ(ಯೋಹಾನ 17:1–5), ತನ್ನ ಶಿಷ್ಯರಿಗಾಗಿ ಮಾಡಿದ ಪ್ರಾರ್ಥನೆ( ಯೋಹಾನ 17:6–19) ಮತ್ತು ಕೊನೆಯದಾಗಿ ಅನಂತರ ತನ್ನನ್ನು ನಂಬುವ ವಿಶ್ವಾಸಿಗಳಿಗಾಗಿ(ಯೋಹಾನ 17:20–26).

ಯೋಹಾನ 17:1–5 ಓದಿರಿ: ಆತನ ಪ್ರಾರ್ಥನೆಯಲ್ಲಿಯ ಗಂಧ ಏನು, ಮತ್ತು ನಾವು ಕಲಿಯಬೇಕಾದದ್ದು ಏನು?

________________________________________

ಯೇಸು ತನಗಾಗಿ ಪಾರ್ಥಿಸುವುದು ಮೊದಲು ಯೋಹಾನನ ಪುಸ್ತಕದಲ್ಲಿ ಈ ಪೂರ್ವದಲ್ಲಿ ನಡೆದ ಘಟನೆಗಳ ಮೂಲಕ ಯೇಸು ಸೂಚಿಸಿದ್ದೇನೆಂದರೆ ಆತನ ಘಳಿಗೆ ಇನ್ನು ಬಂದಿಲ್ಲ ಎಂದು(ಯೋಹಾನ 2:4, 7:30, 8:20). ಆದರೆ ಈಗ ತನ್ನ ಆತ್ಮಾರ್ಪಣೆಯ ಘಳಿಗೆ ಬಂದಿದೆ ಎಂದು ಆತನಿಗೆ ತಿಳಿದಿತ್ತು. ಭೂಮಿಯ ಮೇಲೆ ರಕ್ಷಣೆಯ ರಂಗದಾಟಕ್ಕೆ ತೆರೆ ಬೀಳುವ ಕ್ಷಣಗಳು ಸಮೀಪಿಸುತ್ತಿದ್ದವು, ತನ್ನ ಮಹತ್ಕಾರ್ಯವನ್ನು ಮಾಡಿಮುಗಿಸಲು ಶಕ್ತಿಯ ಅಗತ್ಯವಿತ್ತು. ಅದಕ್ಕಾಗಿ ಇದು ಪ್ರಾರ್ಥನೆಯ ಸಮಯ.

ದೇವರ ಚಿತ್ತವನ್ನು ನೆರವೇರಿಸುವದರ ಮೂಲಕ ಯೇಸು ತಂದೆಯನ್ನು ಮಹಿಮೆ ಪಡಿಸಿದನು, ಆ ಚಿತ್ತ ಶಿಲುಬೆಯ ಹಿಂಸೆಯನ್ನು ತಾಳಿಕೊಳ್ಳುವದಾದರೂ ಕೂಡ ತಾನು ಶಿಲುಬೆಯನ್ನು ಸ್ವೀಕರಿಸಿದ್ದು ಇದು ನನ್ನ ಹಣೆಬರಹ ಎಂದೇನಲ್ಲ; ಬದಲಾಗಿ ತನ್ನ ತಂದೆ ತನಗೆ ಕೊಟ್ಟ ಅಧಿಕಾರವನ್ನು ಹಾಗೆ ಉಪಯೋಗಿಸಿಕೊಂಡನು. ಅತನು ಒಬ್ಬ ಹುತಾತ್ಮನಂತೆ ಸಾಯಲಿಲ್ಲ ಆದರೆ ಸ್ವಇಚ್ಛೆಯಿಂದ, ಯಾವ ಕಾರಣದಿಂದ ಮಾನವನಾಗಿ ಈ ಲೋಕಕ್ಕೆ ಬಂದನೋ ಅದನ್ನು ಈಡೇರಿಸುವದರೊಂದಿಗೆ ತಂದೆಯಾದ ದೇವರನ್ನು ಮಹಿಮೆಪಡಿಸಿದನು. ಆದು, ಲೋಕದ ಪಾಪಗಳಿಗಾಗಿ ಶಿಲುಬೆ ಮೇಲೆ ತಾಳಿದ ತ್ಯಾಗಮಯ ಮರಣ

ಯೋಹಾನ 17:3 ಪ್ರಕಾರ ನಿತ್ಯಜೀವ ಎಂದರೇನು? ದೇವರನ್ನು ಅರಿತುಕೊಳ್ಳುವದೆಂದರೇನು?

ಮೊಟ್ಟಮೊದಲನೆಯದಾಗಿ, ಯೇಸು ಹೇಳುವದೇನೆಂದರೆ ನಾವು ವೈಯಕ್ತಿಕವಾಗಿ ದೇವರನ್ನು ತಿಳಿದುಕೊಳ್ಳುವದರಲ್ಲಿ ನಿತ್ಯಜೀವವಿದೆ. ಹಾಗೆಂದರೆ ಕರ್ಮ ಅಥವಾ ಜ್ಞಾನದಿಂದ ರಕ್ಷಣೆ ಎಂದೇನಲ್ಲ, ಆದರೆ ಯೇಸು ನಮ್ಮೆಲರಿಗಾಗಿ ಶಿಲುಬೆಯ ಮೇಲೆ ಏನು ಮಾಡಿರುವನು ಎಂಬ ತಿಳುವಳಿಕೆ ಬದುಕಿನ ಅನುಭವವಾಗಿ ದೇವರನ್ನು ಅರಿತುಕೊಳ್ಳುವದು. ತಂದೆಯೊಂದಿಗೆ ನಿಕಟಸಂಬಂಧ ಹೊಂದಿರುವದರ ಫಲವಾಗಿಯೋ ನಮಗಾಗಿ ಈ ತಿಳುವಳಿಕೆ. ಮೂಲತಾಮಾನವಸ್ವಭಾವ ಯಾವುದೇ ತಿಳುವಳಿಕೆಯನ್ನು ತೋರುವ ಕಾರ್ಯ ಮತ್ತು ವಿವರಗಳಿಗೆ ಸೀಮಿತಗೊಳಿಸುತ್ತದೆ ಆದರೆ ಯೇಸು ಉದ್ದೇಶಿಸಿದ್ದು ಆಳವಾದ ಮತ್ತು ಸಂತೃಪ್ತಿಪಡಿಸುವ ತಿಳುವಳಿಕೆ; ತಂದೆಯಾದ ದೇವರೊಂದಿಗೆ ವೈಯಕ್ತಿಕ ಸಂಬಂಧ ಹೊಂದಿರುವುದು. ಕ್ರಿಸ್ತನ ಮೊದಲಾಗ ಮನದ ಉದ್ದೇಶವು ಕೂಡ ಮಾನವ ಕುಲವು ದೇವರ ತಿಳುವಳಿಕೆ ಅವರಿಗೆ ಅದು ಅರ್ಥ-ಪೂರ್ಣವೂ ಮತ್ತು ರಕ್ಷಣಾ ಯೋಜನೆಯೊಂದಿಗೆ ಸರಿಬೀಳಿಸಬೇಕೆಂಬುದೇ ಆಗಿತ್ತು. ಅಲ್ಲದೆ ಇಂಥ ತಿಳುವಳಿಕೆ ಮಾನವರು ದೇವರೊಂದಿಗೆ ಐಕ್ಯತೆಯಿಂದಿದ್ದರೆ ಮಾತ್ರ ಸಾಧ್ಯವಾಗುವದೆಂಬುದನ್ನು ಸಾರಿ ಹೇಳುವದಾಗಿತ್ತು.

ದೇವರನ್ನು ವಯಕ್ತಿಕವಾಗಿ ಅರಿತುಕೊಳ್ಳುವುದು ಮತ್ತು ದೇವರ ಬಗ್ಗೆ ಅರಿತುಕೊಳ್ಳವದರ ನಡುವಿನ ವ್ಯತ್ಯಾಸವೇನು? ನಿಮ್ಮ ಯಾವ ಅನುಭವಗಳು ದೇವರನ್ನು ನೀವೆ ಅರಿತುಕೊಳ್ಳಲು ಸಹಾಯ ಮಾಡಿವೆ?

**ಸೋಮವಾರ** **ಅಕ್ಟೋಬರ್** 15

**ಯೇಸು ತನ್ನ ಶಿಷ್ಯರಿಗಾಗಿ ಪ್ರಾರ್ಥಿಸಿದನು**

**ಯೋಹಾನ** 17:9–19 **ಓದಿರಿ: ಯೇಸು ತನ್ನ ಶಿಷ್ಯರು ಯಾವ ನಿರ್ಧಿಷ್ಟ ಅವಶ್ಯಕತೆಗಾಗಿ ಪ್ರಾರ್ಥಿಸಿದರು**?

——————————————————————————————

——————————————————————————————

——————————————————————————————

ಅದಾದನಂತರ ಯೇಸು ತನ್ನ ಶಿಷ್ಯರಿಗಾಗಿ ಪ್ರಾರ್ಥಿಸಿದನು, ಮುಂಬರುವ ದಿನಗಳಲ್ಲಿ ತಾನು ಶರೀರಸಮೇತ ಅವರೋಡನೆ ಇಲ್ಲದಿರುವಾಗ ಅವರು ತನ್ನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದ್ದರು. ಆದ್ದರಿಂದ ಶಿಷ್ಯರನ್ನು ಯೇಸು ತನ್ನ ತಂದೆಯ ವಶಕ್ಕೆ ಅರ್ಪಿಸಿದನು.

ಈ ಭೂಮಿಯ ಮೇಲೆ ಶಿಷ್ಯರ ಸಂರಕ್ಷಣೆಯಾಗ ಬೇಕಿತ್ತು ಅದಕ್ಕಾಗಿ ಯೇಸು ಪ್ರಾರ್ಥಿಸಿದನು. ಇಲ್ಲಿ ಐಏಸು ಜಗತ್ತಿಗಾಗಿ ಪ್ರಾಥಿಸಲಿಲ್ಲ ಕಾರಣ ಜಗತ್ತು ಆತನನ್ನು ಪ್ರಾರಂಭದಲ್ಲಿಯೇ ನಿರಾಕರಿಸಿತು ಮತ್ತು ಅದು ತಂದೆಯ ಚಿತ್ತಕ್ಕೆ ವಷಾದವಾಗಿತ್ತು (1ಯೋಹಾನ 5:19)

ಆದರೆ ಶಿಷ್ಯರು ಈ ಜಗತ್ತಿನಲ್ಲಿ ದೇವರ ಸೇವೆ ಮಾಡಬೇಕಾದುದ್ದರಿಂದ ಈ ಜಗತ್ತಿಲ್ಲಿಯ ಕೆಟ್ಟದ್ದರಿಂದ ಅವರಿಗೆ ರಕ್ಷಣೆ ಬೇಕಿತ್ತು. ಯೇಸುವಿಗೆ ಈ ಜಗತ್ತಿನ ಕಾಳಜಿ ಇದೆ; ಮತ್ತು ಆತನೇ ಜಗತ್ತಿನ ವಿಮೋಚಕನು. ಆದರೆ ಸುವಾರ್ತೆಯನ್ನು ಹರಡುವವರು ಸಾಕ್ಷಿಗಳಾಗಿದ್ದು ಶುಭಸಂದೇಶವನ್ನು ಸಾರಬೇಕು. ಅವರನ್ನು ಕೆಡುಕನು ಸೋಲಿಸಬಾರದೆಂದು ಯೇಸು ಸತ್ಯಸುವಾರ್ತಿಕರ ಪರವವಾಗಿ ಪ್ರಾರ್ಥಿಸಿದನು(ಮತ್ತಾ 6:13). ಹೇಗೂ ಒಬ್ಬ ಶಿಷ್ಯ ಸೋಲಿಸಲ್ಪಟ್ಟನು. ಆ ಸಾಯಂಕಾಲ ಪ್ರಾರಂಭದಲ್ಲಿಯೇ ಯೇಸು ಅವರಲ್ಲೊಬ್ಬನು ತನ್ನನ್ನು ಹಿಡಿದುಕೊಡಲು ಮನಸ್ಸು ಮಾಡಿದ್ದಾನೆ ಎಂದಿದ್ದನು(ಯೋಹಾನ 13:18–30) ಯೂದನು ಕ್ರಸ್ತನನ್ನು ಹಿಡಿದುಕೊಡುತ್ತಾನೆ ಎಂದು ಪ್ರವಾದನೆಯಲ್ಲಿ (ಕೀರ್ತನೆ 41:9) ಬರೆದಿದ್ದನ್ನು ಕ್ರಿಸ್ತನು ಇಲ್ಲಿ ಪ್ರಸ್ತಾಪಿಸಿದ್ದರೂ ಯೂದನು ವಿಧಿಯ ಬಲಿಯೊನಲ್ಲ. ಕೊನೆಯ ಭೋಜನದ ಸಮಯ ಯೇಸು ಸ್ನೇಹ ಮತ್ತು ಪ್ರೀತಿಯಿಂದಲೇ ಅವನ ಮನವಲಿಸಲು ಯತ್ನಿಸಿದನು (ಯೋಹಾನ 13:26–30)

“ ಪಸ್ಕ ಭೋಜನದ ಸಮಯ ಯೇಸು, ತನ್ನನ್ನು ಹಿಡಿದು ಕೊಡುವ ವಂಚಕನೊಬ್ಬನು ಅವರಲ್ಲಿದ್ದಾನೆ ಎಂದು ಹೇಳುವದರ ಮೂಲಕ ತನ್ನ ದೈವತ್ವವನ್ನು ತೋರಿಸಿದನು. ಇತರ ಶಿಷ್ಯರ ಸೇವೆಯನ್ನು ವಿನಯದಿಂದ ಮಾಡಿದಂತೆಯೇ ಯೂದನು ಸೇವೆಯನ್ನು ಮಾಡಿದನು. ಆದರೆ ಆ ಪ್ರೀತಿಯ ಮನವಿ ಫಲ ನೀಡಲಿಲ್ಲ”. ಎಲ್ಲೆನ್ ವೈಟ್, ದಿ ಡಿಸಾಯರ್ ಆಫ್ ಏಜೀಸ್, ಪು.720.

ದ್ವೇಷ ಮತ್ತು ಅಸೂಯೇ ಹುಟ್ಟಿಕಿಚ್ಚು ಶಿಷ್ಯರಲ್ಲಿ ಈ ಹಿಂದೆ ಒಡಕನ್ನುಂಡು ಮಾಡಿದ ಹಾಗೆ ಮಾಡುತ್ತವೆ ಎಂಬುದನ್ನು ಅರಿತ ಯೇಸು ಅವರ ಐಕ್ಯತೆಗಾಗಿ ಪ್ರಾರ್ಥಿಸಿದನು. “ಪವಿತ್ರ ತಂದೆಯೇ, ನಿನ್ನ ನಾಮದಲ್ಲಿ ನನಗೆ ನೀನು ಕೊಟ್ಟಂಥಹ ಇವರು ನಾವು ಒಂದಾಗಿರುವಂತೆ ಅವರೂ ಒಂದಾಗಿರಲಿ” (ಯೋಹಾನ 17:11) ಇಂಥ ಐಕ್ಯತೆ ಮಾನವ ಪ್ರಯತ್ನದಿಂದಾಗುವದಲ್ಲಿ ಇದು ದೇವರ ಕೊಡುಗೆ ಹಾಗೂ ಆತನ ಕೃಪೆಯಿಂದ ಮಾತ್ರ ಉಂಟಾಗುವ ಫಲ. ಈ ಐಕ್ಯತೆಯು ತಂದೆಯಾದ ದೇವರ ಮತ್ತು ಮಗನಲ್ಲಿ ಇರುವ ಐಕ್ಯತೆಯ ಆಧಾರದ ಮೇಲೆ ಉಂಟಾಗುವುದು, ಅಲ್ಲದೇ ಇಂಥ ಐಕ್ಯತೆ ಭವಿಷ್ಯದಲ್ಲಿಯ ಅವರ ಪರಿಣಾಮಕಾರಿ ಸೇವೆಗೆ ಅತ್ಯವಶ್ಯಯವಾಗಿ ಬೇಕಾದದ್ದು.

ಅಂಥ ಸೇವೆಗೆ ಇನ್ನೊಂದು ಅಗತ್ಯವಾದದ್ದು, ಅವರು ತಮ್ಮನ್ನು ಸತ್ಯಕ್ಕೆ ಸಂಪೂರ್ಣವಾಗಿ ಸಮರ್ಪಿಸುವುದು. ದೇವರ ಕೃಪೆ ಅವರೆಲ್ಲರ ಹೃದಯದ ಮೇಲೆ ಕೆಲಸಮಾಡಿ ಅವರನ್ನು ಪರಿವರ್ತಿಸುವುದು. ಆದರೆ ಅವರು ದೇವ ಸತ್ಯದ ಸಾಕ್ಷಿಗಳಾಗಿರಬೇಕಾದರೆ, ಆ ಸತ್ಯ ಅವರನ್ನು ಮಾರ್ಪಡಿಸಲೇಬೇಕು.

**“ಈ ಜಗತ್ತನವರಲ್ಲಿ” ಎಂಬುದರ ಅರ್ಥವೇನು? ನಮ್ಮ ಬಗ್ಗೆ ಏನು ಹೇಳಬಹುದು, ನಮ್ಮ ಬದುಕಿನ ಬಗ್ಗೆ ನಮ್ಮ ಜೀವನ “ಈ ಜಗತ್ತಿನವರಲ್ಲ” ಎಂದು ಹೇಳುತ್ತವೆಯೋ?**

**ಮಂಗಳವಾರ** **ಅಕ್ಟೋಬರ್ 16**

**ನನ್ನನ್ನು ನಂಬುವವರಿಗಾಗಿ**

ಆತನ ಶಿಷ್ಯರಿಗಾಗಿ ಪ್ರಾರ್ಥಿಸಿದ ನಂತರ ಯೇಸು ತನ್ನ ಪ್ರಾರ್ಥನೆಯನ್ನು “ಅವರ ವಾರ್ತೆಯಿಂದಾಗಿ ನನ್ನನ್ನು ನಂಬುವವರಿಗಾಗಿ” (ಯೋಹಾನ 17:20) ಎಂದು ಭವಿಷ್ಯದ ವಿಶ್ವಾಸಿಗಳಿಗಾಗಿ ವಿಸ್ತರಿಸಿದನು.

**ಯೋಹಾನ 17:20–26 ಓದಿರಿ: ಸುವಾರ್ತೆಯನ್ನು ನಂತರ ನಂಬುವವರಿಗಾಗಿ ಯೇಸು**

**ಬಯಸಿದ ಶ್ರೇಷ್ಠ ಬಯಕೆ ಯಾವುದು? ಈ ಪ್ರಾರ್ಥನೆ ಈಡೇರಲೇಬೇಕೆಂಬುದು ಬಹಳ ಪ್ರಾಮುಖ್ಯ ಯಾಕೆ?**

--------------------------------------------

--------------------------------------------

--------------------------------------------

ತಂದೆ ಮತ್ತು ಮಗನು ಒಂದಾಗಿರುವ ರೀತಿಯಲ್ಲಿ, ಎಂದು ಯೇಸು ಪ್ರಾರ್ಥಿಸುತ್ತ ಭವಿಷ್ಯದಲ್ಲಿಯ ವಿಶ್ವಾಸಿಗಳೂ ಕೂಡ ಒಂದಾಗಿರಬೇಕೆಂದನು. ಯೋಹಾನ ಸುವಾರ್ತೆಯ ಕೆಲವು ಸಂದರ್ಭಗಳಲ್ಲಿ ಯೇಸು ತಂದೆ ಮತ್ತು ಮಗನ ಐಕ್ಯತೆಯಿಂದಿರುವದರ ಬಗ್ಗೆ ಪ್ರಸ್ತಾಪಿಸಿದ್ದಾನೆ. ಒಬ್ಬರನ್ನೊಬ್ಬರು ಬಿಟ್ಟು ಇವರು ಏನನ್ನೂ ಮಾಡಿಲ್ಲ, ಅವರ ಎಲ್ಲ ಕಾರ್ಯಗಳಲ್ಲಿ ಒಂದಾಗಿ ಇದ್ದರೆ (ಯೋಹಾನ 5:20–23)ಇವರೀರ್ವರು ಬಿದ್ದುಹೋದ ಮಾನವಕುಲವನ್ನು ಅಪಾರವಾಗಿ ಪ್ರೀತಿಸುತ್ತಾರೆ, ಎಷ್ಟರ ಮಟ್ಟಿಗೆ ಎನ್ನುವಾಗ, ತಂದೆ ತನ್ನ ಪುತ್ರನನ್ನು ಈ ಲೋಕಕ್ಕಾಗಿ ಕಳುಹಿಸಲು ಮನಸ್ಸು ಮಾಡಿದರೆ ಪುತ್ರನು ಈ ಲೋಕಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಲು ತಯಾರಾದನು(ಯೋಹಾನ 3:16, 10:15).

ಈ ಪ್ರಾರ್ಥನೆಯಲ್ಲಿ ಯೇಸು ಐಕ್ಯತೆ ಕುರಿತು ಪ್ರಸ್ತಾಪಿಸಿರುವದು ತನ್ನ ಮತ್ತು ತಂದೆ ಇಬ್ಬರ ನಡುವೆ ಪ್ರೀತಿ ಹಾಗೂ ಉದ್ದೇಶಗಳ ಐಕ್ಯತೆ ಹೇಗಿದೆ ಎಂಬುದನ್ನು ತೋರಿಸಲು "ನಿಮ್ಮೊಳಗೆ ಒಬ್ಬರಮೇಲೊಬ್ಬರಿಗೆ ಪ್ರೀತಿಯಿಂದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು" (ಯೋಹಾನ 13:35). ಪ್ರೀತಿಯಿಂದ ಈ ಐಕ್ಯತೆಯನ್ನು ಮೈಗೂಡಿಸಿಕೋಂಡರೆ ಎಲ್ಲರ ಮುಂದೆ ನಾವು ಯೇಸುವಿನೊಡನೆಯ ಮತ್ತು ತಂದೆಯೊಡನೆಯ ಸಂಬಂಧಗಳನ್ನು ವ್ಯಕ್ತಪಡಿಸಿದಂತಾಗುತ್ತದೆ. "ನಿಜವಾದ ಐಕ್ಯತೆಯಿಂದಿರುವದು ಸುವಾರ್ತೆಯ ಸತ್ಯತೆಗೆ ಸಾಕ್ಷಿಯಾಗಿರುಂತೆ, ಬಲವಂತ ಪಡಿಸುತ್ತದೆ." ಆಂದ್ರೆಯಸ್ ಜಿ ಕೊಸ್ಟೇನ್‌ಬರ್ಗರ್. ಯೇಸುವೇ ರಕ್ಷಕನೆಂದು ಗೊತ್ತಾಗುವುದು ಹೀಗೆಯೇ. ಇನ್ನೊಂದು ಪದದಲ್ಲಿ ಹೇಳುವುದಾದರೆ, ಯೇಸು ಪ್ರಾರ್ಥಿಸುವ ಐಕ್ಯತೆ ಕಣ್ಣಿಗೆ ತೋರದೆ ಇರಲಾರದು. ದೇವ ಜನರೊಳಗೆ ಪ್ರೀತಿ ಅನ್ಯೋನ್ಯತೆಗಳನ್ನು ಇತರರು ಕಾಣಲಿಲ್ಲವಾದರೆ ಸುವಾರ್ತೆಯ ಸತ್ಯತೆಯನ್ನು ಅವರು ಹೇಗೆ ಮನಸಾರೆ ಒಪ್ಪಿಕೊಂಡಾರು?

"ನಿತ್ಯವಾದ ಸತ್ಯದ ಬುನಾದಿಯ ಮೇಲೆ ಪರಿಪೂರ್ಣ ಐಕ್ಯತೆಯಿಂದ ನಿಲ್ಲುವ ಜನಾಂಗವನ್ನು ದೇವರು ಸಿದ್ಧಮಾಡುತಿದ್ದಾನೆ ತನ್ನ ಎಲ್ಲ ಜನಾಂಗ, ದೇವರ ವಿಶ್ವಾಸದಲ್ಲಿ ಐಕ್ಯತೆಯಿಂದಿರುವ ವಿನ್ಯಾಸವನ್ನು ಆತನು ನಿರೂಪಿಸಿದ್ದಾನೆ. ಯೇಸು ಕೃಜೇಗೇರುವ ಪೂರ್ವದಲ್ಲಿ ಆತನು ಮಾಡಿದ ಪ್ರಾರ್ಥನೆ, ತನ್ನ ಶಿಷ್ಯರು

ಒಂದಾಗಿರಬೇಕೆಂದು, ಅದು ತಾನು ತಂದೆಯೊಡನೆ ಹೇಗೆ ಒಂದಾಗಿದ್ದೇನೋ ಅದೇ ರೀತಿಯಲ್ಲಿ ಹಾಗಾದರೆ ತಂದೆಯೇ ಅವನನ್ನು ಕಳುಹಿಸಿರುವನೇಂದು ಜಗತ್ತು ನಂಬುವಂತಾಗುವುದು. ಇದು ಬಹು ಮನ ಮೆಚ್ಚುವ ಅದ್ಭುತ ಪ್ರಾರ್ಥನೆಯಾಗಿದೆ, ಇಂದಿಗೂ ಕೂಡ ಅದರ ಪರಿಣಾಮವಾಗುತ್ತದೆ, ಯಾಕೆಂದರೆ ಆತನ ಪ್ರಾರ್ಥನೆ; “ಇವರಿಗಾಗಿ ಮಾತ್ರ ನಾನು ಪ್ರಾರ್ಥಿಸುತ್ತದ್ದೇನೆ”, ಎಂಬುದಾಗಿತ್ತು.

“ಕ್ರಿಸ್ತನ ಹಿಂಬಾಲಕರೆಂದು ಕರೆಸಿಕೊಳ್ಳುವ ಪ್ರತಿಯೊಬ್ಬನು ತಮ್ಮ ಬದುಕಿನಲ್ಲಿ ಈ ಪ್ರಾರ್ಥನೆಗೆ ಪ್ರಾಮಾಣಿಕ ಉತರ ನೀಡಲು ಪ್ರಯತ್ನಿಸಬೇಕು” ಎಲ್ಲೆನ್ ವೈಟ್, ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂ 4 ಪು. 17.

**ಇಲ್ಲಿ ಚರ್ಚಿಸಿದ ಐಕ್ಯತೆಯನ್ನು ಮೈಗೂಡಿಸಿಕೊಳ್ಳಲು ನಾವು ಮತು ನಮ್ಮ ಸಭೆ ಏನು ಮಾಡುತ್ತಿದ್ದೇವೆ? ಐಕ್ಯತೆಯ ಅಗ್ರ ಶ್ರೇಣಿಯನ್ನು ಸಭೆ ಮುಟ್ಟಲು ಪ್ರತಿಯೊಬ್ಬರೂ ಅವರವರ ಅಹಂಗಳಿಗೆ ಸಾಯುವುದು ಅಗತ್ಯವಾಗಿದೆ ಯಾಕೆ?**

**ಬುಧವಾರ** **ಅಕ್ಟೋಬರ್ 17**

**ಕ್ರೈಸ್ತರೊಳಗೆ ಐಕ್ಯತೆ**

**ಮಾರ್ಕನು 9:38–41 ಮತ್ತು ಯೋಹಾನ 10;16 ಓದಿರಿ: ಯೇಸು ಯೋಹಾನನಿಗೆ ಪ್ರತ್ಯುತ್ತರವಾಗಿ ಹೇಳಿದ್ದು ಇತರರ ಬಗ್ಗೆ ನಾವು ಮಾಡುವ ತೀರ್ಪು ಮತ್ತು ಇತರರನ್ನು ಪ್ರತ್ಯೇಕಿಸುವ ವಿಚಾರವಾಗಿ ನಮಗೇನು ತಿಳಿಸುತ್ತದೆ?**

------------------------------------------

------------------------------------------

------------------------------------------

--------------------

ಯೋಹಾನ 17ರಲ್ಲಿಯ ಯೇಸು ಮಾಡಿದ ಪ್ರಾರ್ಥನೆ ಸವೆಂತ್ ಡೇ ಅಡ್ವೆಂಟಿಸ್ಟ್ ಇಡೀ ಸಂಸ್ಥಾಸಬೆಯ ಐಕ್ಯತೆಗಾಗಿ ಮಾಡಿದ ಪ್ರಾರ್ಥನೆ ಎಂದು ಅಥ-ರ್ಮಾಡಿಕೊಂಡಿದ್ದಾರೆ. ಮೂರು ದಲೂತರ ಸಂದೇಶವನ್ನು ಇಡೀ ಜಗತ್ತಿಗೆ ಸಾರಿ ಮುಗಿಸಬೇಕು. ಈ ವಿಷಯದಲ್ಲಿ ನಾವು ಇತರರೊಂದಿಗೆ ಸ್ವಲ್ಪ ಕಲಹದಲ್ಲಯೂ ಇದ್ದೇವೆ. ಇತರ ಕ್ರೈಸ್ತರೊಡನೆ ಐಕ್ಯತೆಯಿಂದಿರುವದು ಹೇಗೆ? ಯೇಸುವಿನ ಪ್ರಾಥ-ರ್ನೆ ನಾವು ಅವರೊಡನೆ ಐಕ್ಯತೆಯಿಂದಿರುವವರ ಬಗ್ಗೆ ಸಭೆಯಲ್ಲಿ ಮಾತ್ರವಲ್ಲ,

ಇತರ ಸಭೆಗಳಲ್ಲಿಯೂ ಕ್ರಿಸ್ತನಾಯ್ದುಕೊಂಡ ವಿಶ್ವಾಸಿಗಳು ಇದ್ದಾರೆ ಎಂಬುದಕ್ಕೆ ಯಾವ ಸಂಶಯವಿಲ್ಲ. ಅದರ ಜೊತೆಗೆ, ಬಾಬೇಲಿನಲ್ಲಯೂ ಕೂಡ ದೇವರ ವಿಶ್ವಾಸಿಗಳಿದ್ದಾರೆ ಎಂದು ಸತ್ಯವೇದ ಸ್ಪಷ್ಟ ಪಡಿಸುತ್ತದೆ; "ನನ್ನ ಪ್ರಜೆಗಳೇ ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು" (ಪ್ರಕಟನೆ 18:4).

ಇದೇ ಸಂದರ್ಭದಲ್ಲಿ, ಪ್ರಕಟನೆ ಪುಸ್ತಕದ ಪ್ರಕಾರ, ಕ್ರಿಸ್ತನ ಹೆಸರು ಹೇಳಿಕೊಳ್ಳುವವರಲ್ಲಿಯೇ ಧರ್ಮಭ್ರಷ್ಟತೆ ಇದ್ದು ಅಂತ್ಯ ದಿನಗಳಲ್ಲಿ ಸುಳ್ಳು ಕ್ರೈಸ್ತರೆಲ್ಲಾ ಒಂದಾಗಿ ರಾಜಕ್ಕಿಯ ಶಕ್ತಿಗಳೊಡನೆ ಕೂಡಿ ಪ್ರಕಟಣೆ 13:1–17ರಲ್ಲಿ ವಿವರಿಸಿದ ರೀತಿಯಲ್ಲಿ ದೇವ ಜನರನ್ನು ಹಿಂಸಿಸುವರು. ಆದ್ದರಿಂದ ಸವೆಂತ್ ಡೇ ಅಡ್ವೆಂಟಿಸ್ಟರು ಇತರ ಕ್ರೈಸ್ತರೊಡನೆ ಐಕ್ಯಮತ್ಯದಿಂದಿರುವದಲ್ಲಿ ಎಚ್ಚರ ವಹಿಸಿದ್ದಾರೆ.

ಹಾಗಾದರೆ ಇತರ ಕ್ರೈಸ್ತರೊಡನೆ ನಮ್ಮ ಸಂಬಂಧವೇನು? ಎಲ್ಲೆನ್ ಜಿ ವೈಟ್, ಇತರ ಕ್ರೈಸ್ತರೊಡನೆ ಸವೆಂತ್ ಡೇ ಅಡ್ವೆಂಟಿಸ್ಟರು ಹೇಗಿರಬೇಕೆಂದು ಅದರಲ್ಲೂ ಐಕ್ಯತೆಯಿಂದಿರುವದರ ಬಗ್ಗೆ ಕೆಳಗಿನಂತೆ ತಿಳಿಸಿದ್ದಾರೆ; "ಮಾನವನಾಗಿ ಒಬ್ಬ ವ್ಯಕ್ತಿ ತನ್ನ ಚಿತ್ತವನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಟ್ಟಾಗ, ಆತನು ಸೇವೆ ಮಾಡುವವರ ಹೃದಯದ ಮೇಲೆ ಪವಿತ್ರಾತ್ಮನೇ ಪ್ರಭಾವ ಬೀರುತ್ತಾನೆ. ನನಗೆ ತಿಳಿಸಲ್ಪಟ್ಟಿದೆ, ನಾವು ಮಹಿಳೆಯರ ಸಂಯಮ ಸಂಘದ ಕಾರ್ಮಿಕರನ್ನು ನಿರಾಕರಿಸಬಾರದು ಎಂದು ಅವರ ಸಂಪೂರ್ಣ ವರ್ಜನೆಯ ವಿಷಯದಲ್ಲಿ ಸಹಕರಿಸುವದರ ಮೂಲಕ ನಮ್ಮ ಏಳನೆಯ ದಿನ ಸಬ್ಬತ್ತು ಆಚರಣೆಯ ನಿಲುವಿನಲ್ಲಿ ಯಾವ ಬದಲಾವಣೆಗಳಾಗುವುದಿಲ್ಲ ಮತ್ತು ಅವರ ಸಂಯಮ ನೀತಿಗೆ ನಮ್ಮ ಮೆಚ್ಚಿಗೆ ಬೆಂಬಲಗಳಿವೆ ಎಂಬುದನ್ನು ತೋರಿಸಿದ ಹಾಗೂ ಆಯಿತು. ಸಂಯಮದ ವಿಷಯದಲ್ಲಿ ನಾವು ನಮ್ಮ ವಿಚಾರ ಬಾಗಿಲು ತೆರೆದು ಅವರನ್ನು ಸೇರಿಸಿಕೊಂಡಾಗ ನಮಗೆ ಅವರಿಂದ ಸಹಾಯವಾಗುತ್ತದೆ, ನಮ್ಮೊಡನೆಯ ಅವರ ಸಹವಾಸದಿಂದ ನಮ್ಮಲ್ಲಿಯ ಅಂತ್ಯಕಾಲದ ಸತ್ಯಗಳನ್ನು ಪವಿತ್ರಾತ್ಮನು ಅವರ ಹೃದಯಗಳ ಮೇಲೆ ಪ್ರಭಾವಿಸುವನು:– ವೆಲ್ಫೇರ್ ಮಿನಿಸ್ಟ್ರೀ ಪು. 163.

ಇಲ್ಲಿ ವೈಟಮ್ಮ ಒಂದು ನಿರ್ಧಿಸ್ಟ ಸಮಯದ ಸಮಸ್ಯೆಯ ಬಗ್ಗೆ ಉಪಶಮನ ಸೂಚಿಸಿದ್ದರೂ, ಆದರಿಂದ ತಾತ್ವಿಕವಾದ ಉಪದೇಶ ನಮಗೆ ತಿಳಿಸಲ್ಪಟ್ಟದೆ. ಇತರ ಕ್ರೈಸ್ತರೊಡನೆ ನಾವು ಯಾವಾಗ ಒಂದಾಗ ಬಹುದು, ಯಾವಾಗ ಒಂದಾಗಬಾರದೆಂಬುದು ತಿಳಿಯುತ್ತದೆ. ಮೊದಲನೇಯದಾಗಿ ಇತರರೊಡನೆ ಅವರ ಸಾಮಾಜಿಕ ಕಾರ್ಯಗಳಲ್ಲಿ ನಾವು ಸಹಕರಿಸಬಹುದು. ಎರಡು, ಅವರೊಡನೆ ಸಹಕರಿಸುವಾಗ, ಒಂದಾಗಿ ಕೆಲಸ ಮಾಡುವಾಗ ನಮ್ಮ ತತ್ವ, ವಿಶ್ವಾಸಗಳಲ್ಲಿ ರಾಜಿಯಾಗದ ರೀತಿಯಲ್ಲಿ ವ್ಯವಹರಿಸಬೇಕು. ಮೂರನೆಯದು, ಈ "ಐಕ್ಯತೆ" ಯನ್ನು

ಪ್ರಯೋಜಿತವಾಗಿಯೇ ಇಟ್ಟುಕೊಂಡು ನಾವು ಆಶೀರ್ವಾದವಾಗಿ ಅನುಭವಿಸುತ್ತಿರುವ ಅಮೂಲ್ಯವಾದ ಸತ್ಯವನ್ನು ಇತರರಿಗೆ ತಿಳಿಸಬೇಕು.

**ಗುರುವಾರ** **ಅಕ್ಟೋಬರ್ 18**

**ಪ್ರೀತಿಯಿಂದ ಹಂಚಿಕೊಳ್ಳುವ ಒಂದು ವಿಶ್ವಾಸ**

**ಯೋಹಾನ 13:3ರಲ್ಲಿ ಯೇಸು ಹೇಳಿದ್ದು, ದೇವರನ್ನು ಅರಿತುಕೊಳ್ಳುವುದೇ ನಿತ್ಯ ಜೀವ. 1ಯೋಹಾನ 2:3–6 ಓದಿರಿ: ದೇವರನ್ನು ಅರಿತುಕೊಳ್ಳುವದೆಂದರೇನು? ಪ್ರತಿದಿನದ ಬದುಕಿನಲ್ಲಿ ದೇವರ ತಿಳುವಳಿಕೆ ನಮಗಿದೆ ಎಂಬುದನ್ನು ಹೇಗೆ ಇತರ–ರಿಗೆ ತೋರಿಸುವಿರಿ?**

––––––––––––––––––––––––––––––––––––––––––––

––––––––––––––––––––––––––––––––––––––––––––

––––––––––––––––––––––––––––––––––––––––––––

ಸಾಮಾನ್ಯವಾಗಿ, ಸಮಾಜದಲ್ಲಿ ಜನರು ತಾವು ಶಿಸ್ತಿನವರು, ದೇಶದ ಕಾನೂನುಗಳನ್ನು ಕೈಗೊಂಡು ನಡೆಯುವವರೆಂದು ಕರೆಯಿಸಿಕೊಳ್ಳಬೇಕೆನ್ನುವವರಾಗಿದ್ದರೂ, ದೇವರ ಆಜ್ಞೆಗಳನ್ನು ಕೈಗೊಂಡು ನಡೆಯುವ ಹಂಗಿನಲ್ಲಿದ್ದೇವೆ ಎಂಬುದನ್ನು ನಿರಾಕರಿಸುತಾರೆ. ಇನ್ನು ಕೆಲವರು ದೇವರ ಕೃಪೆ ನಮಗಿರುವದರಿಂದ ದೇವರ ಆಜ್ಞೆಗಳ ಅಗತ್ಯವಿಲ್ಲವೆಂದು ವಾಗ್ವಾದ ಮಾಡುತ್ತಾರೆ. ಆದರೆ ಅದು ಸತ್ಯವೇದದ ಬೋಧನೆಯಲ್ಲ: "ದೇವರ ಆಜ್ಞೆಗಳನ್ನು ಕೈಗೊಂಡು ನಡೆಯುವುದು ದೇವರನ್ನು ತಿಳಿದುಕೊಳ್ಳುವದಕ್ಕಲ್ಲ ಬದಲಾಗಿ ದೇವರನ್ನು ಅಂದರೆ ಯೇಸುವನ್ನು ಪ್ರೀತಿಸುವವರು ಅರಿತವರು ತೋರುವ ಜೀವನ ಶೈಲಿ ಅದು." ಎಕ್ಕಾರ್ಡ ಮುಲ್ಲರ್. ಯೇಸು ಸ್ವಾಮಿಯೇ ಒತ್ತಿ ಹೇಳಿದ್ದು: "ನೀವು ನನ್ನನ್ನು ಪ್ರೀತಿಸುವವರಾಧರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ". " ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು" (ಯೋಹಾನ 14:15,21). ನಾವು ದೇವರ ಮಕ್ಕಳನ್ನು ಪ್ರೀತಿಸುತ್ತೇವೆಂಬುದನ್ನು ದೇವರನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಅನುಸ–ರಿದುವದರಿಂದಲೇ ತಿಳಿದುಕೊಳ್ಳುತ್ತೇವೆ. ದೇವರ ಮೇಲಿನ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇ ಆತನ ಆಜ್ಞೆಗಳು ಭಾರವಾದವುಗಳಲ್ಲ (ಯೋಹಾನ 5:2,3)

**ಯೋಹಾನ 13:34,35 ಓದಿರಿ: ಯೇಸು ತನ್ನ ಶಿಷ್ಯರಿಗೆ ಕೊಟ್ಟ ನೂತನ ಆಜ್ಞೆ ಯಾವುದು ಮತು ಯೇಸುವಿನ ಹಿಂಬಾಲಕರೊಳಗೆ ಐಕ್ಯತೆಯನ್ನು ಮೂಡಿಸುವುದಕ್ಕೆ ಇದು ಹೇಗೆ ಸಂಬಂಧಿಸಿದೆ?**

________________________________________________

________________________________________________

________________________________________________

ತನ್ನ ನೆರೆಯವರನ್ನು ಪ್ರೀತಿಸಬೇಕೆಂಬ ಆಜ್ಞೆ ಹೊಸದೇನು ಅಲ್ಲ: ಮೋಶೆಯ ಮೂಲಕ ದೇವರು ಇಂಥ ಸೂಚನೆಗಳನ್ನು ಮೊದಲೇ ತಿಳಿಸಿದ್ದಾನೆ(ಯಾಜಕ 19:18). ಹೊಸದೇನು ಅಂದರೆ ಯೇಸು ತನ್ನ ಶಿಷ್ಯರಿಗೆ ಆಜ್ಞಾಪಿಸಿದ್ದೇನೆಂದರೆ ಆತನು ಅವರನ್ನು ಪ್ರೀತಿಸಿದಂತೆ ಅವರು ಒಬ್ಬರನ್ನೊಬ್ಬರು ಪ್ರೀತಿಸಬೇಕೆ. ಯೇಸುವಿನ ಸ್ವತ್ಯಾಗದ ಪ್ರೀತಿಯು ಮಾದರಿಯಾಗಿ ಕ್ರೈಸ್ತ ಸಮುದಾಯಕ್ಕೆ ನೂತನ ನೈತಿಕ ನಿಯಮವಾಯಿತು. ಎಂಥ ಮಹಿಮಾಕರ ಪ್ರಮಾಣ ನಮ್ಮ ಗುರಿಯಾಗಿ ಇಡಲ್ಪಟ್ಟಿದೆ. ಯೇಸುವಿನ ಬದುಕು ಪ್ರೀತಿಯನ್ನು ಕಾರ್ಯರೂಪಕ್ಕೆ ಹಾಕುವ ನಿದರ್ಶನವೆನಿಸಿದೆ. ಕೃಪೆಯ ಈ ಕಾರ್ಯವು ಬಂದು ಮುಂದೆವರೆದ ಪ್ರೀತಿಯ ಸೇವೆ, ಸ್ವ–ನಿರಾಕರಣೆ ಮತ್ತು ಸ್ವ–ತ್ಯಾಗದ ಪ್ರಯತ್ನವಾಗಬೇಕು. ಯೇಸುವಿನ ಬದುಕು ಇತರರ ಒಳಿತಾಗಿ ಕೊನೆಇಲ್ಲದ ಕಾರ್ಯ ರೂಪಗೊಂಡ ಪ್ರೀತಿ ಮತ್ತು ಸ್ವ–ತ್ಯಾಗ ಕ್ರೈಸ್ತನನ್ನು ಇಂಥ ಕಾರ್ಯಕ್ಕೆ ಮೈದುಂಬಿಸಿದ ತತ್ವ ಇಂದು ಆತನ ಜರನ್ನೂ ಒಬ್ಬರೊನ್ನೊಬ್ಬರ ಪ್ರೀತಿ ಮೈದುಂಬಿಸಬೇಕು. ಇಂಥ ಪ್ರೀತಿ ಜಗತ್ತಿಗೆ ಮಹಾ ಬಲಶಾಲಿ ಸಾಕ್ಷಿಯಾಗಿ ನಮ್ಮೆಲ್ಲರನ್ನು ಒಂದಾಗಿ ಬೆಸೆಯುವ ತಾಕತ್ತು ಆಗುವುದಲ್ಲಿ ಸಂಶಯವಿಲ್ಲ.

**ಯೇಸು ಇತರರಿಗಾಗಿ ವ್ಯಕ್ತಪಡಿಸಿದ ಸ್ವತ್ಯಾಗದ ಪ್ರೀತಿಯನ್ನು ಇಂದು ನಾವು ಕೂಡ ವ್ಯಕ್ತಪಡಿಸಲು ಕಲಿಯುವದು ಹೇಗೆ?**

**ಶುಕ್ರವಾರ** **ಅಕ್ಟೋಬರ್ 19**

**ಹೆಚ್ಚಿನ ಅಭ್ಯಾಸಕ್ಕಾಗಿ: ಎಲೆನ್ ಜಿ ವೈಟ್, " ಬದಲಾಗದಂಥ", ಪು.443–446 "ಮಹಾಹೋರಾಟ, ಧಾರ್ಮಿಕ ಪಂಗಡಗಳು ಇತರರೊಡನೆ ಸಂಬಂಧಗಳು" ಪು. 763,764 ಮತ್ತು "ರೋಮನ್ ಕಥೋಲಿಕ್ ಸಭೆ", ಪು. 1110, ಎಲೆನ್ ಜಿ ವೈಟ್ ಎನ್ಸೈಕ್ಲೋಪೀಡಿಯಾ ಓದಿರಿ: " ಸವೆಂತ್ ಡೇ ಅಡ್ವೆಂಟಿಸ್ಟ್ ಸಭೆ**

ಸ್ಥಳಿಯ ಸಭೆಗಳನ್ನೊಳಗೊಂಡಿರುವ ಸಾರ್ವತ್ರಿಕ ಸಭೆಯಾಗಿದ್ದರೂ ಅಡ್ವೆಂಟಿಸ್ಟರು ಇದು ಕ್ರಿಸ್ತನ ಸಾರ್ವತ್ರಿಕ ಸಭೆಯೆಂದು ಹೇಳಿಕೊಳ್ಳುವದಿಲ್ಲ. ಸಾರ್ವತ್ರಿಕ ಸಭೆಯು ಯಾವುದೇ ಒಂದು ಪಂಗಡಕ್ಕಿಂತ ವಿಶಾಲವಾದದ್ದು. ಅದು ಯೇಸುವನ್ನು ನಂಬಿ ಆತನನ್ನು ಹಿಂಬಾಲಿಸುವವರಿಂದ ರಚಿತವಾಗಿರೂವದರಿಂದ ಅದು ಸದೃಷ್ಯ ಮತ್ತು ಅದೃಷ್ಯವಾದದ್ದು. ಪ್ರಕಟನೆಯ ಪುಸ್ತಕದಲ್ಲಿ ಕ್ರೈಸ್ತರೊಳಗೆ ಮನೆಮಾಡಿರುವ ಧರ್ಮಭ್ರಷ್ಟತೆಯನ್ನು ಕುರಿತು ಖಾರವಾದ ವಿವರಣೆಯನ್ನು ಗಮನಿಸಿದಾಗ ಮೇಲಿನ ಒಂದು ಧಾರ್ಮಿಕ ನಿಲುವು ಬಹುಗಾತ್ರದಾಗಿ ಕಂಡು ಬರುತ್ತದೆ ಪ್ರಕಟನೆ 12ನೇ ಅಧ್ಯಾಯದಲ್ಲಿಯ ನಿಷ್ಕಳಂಕ ಸಭೆಯನ್ನು ಪ್ರಕಟನೆ 17ರಲ್ಲಿ 'ಸೂಳೆ'ಗೆ ಹೋಲಿಸಲಾಗಿದೆ, ಪ್ರಕಟನೆ 21 ಮತ್ತು 22ರಲ್ಲಿ ಬಾಬೇಲ್, ಆ ಮಹಾನಗ–ರಿಯು ಕುರಿಯಾದಾತನ ಮದಲಗಿತ್ತಿ ಪವಿತ್ರ ಪಟ್ಟಣ, ನೂತನ ಯೆರೂಸಲೇಮ್‌ಗೆ ಹೋಲಿಸಲ್ಪಟ್ಟಿದೆ. ಮೊದಲನೆಯ ಶತಮಾನದಲ್ಲಿ ಸಾರ್ವತ್ರಿಕ ಸಭೆ ಸದೇಷ್ಯವಾಗಿ ಕಂಡಿರಬಹುದು, ಆದರೆ ಮದ್ಯಯುಗದ ಹೊತ್ತಿಗೆ ಅದನ್ನು ಹಾಗೆ ಕಾಣುವದು ಕಷ್ಟ ಮತ್ತು ಸಂಕೀರ್ಣಿಕ. "ಆದ್ದರಿಂದ ಅಡ್ವೆಂಟಿಸ್ಟರು ದೇವರ ಸಭೆಯೆಂಬ ಭಾವವನ್ನು ತಮ್ಮ ಪಂಗಡಕ್ಕೆ ಮಾತ್ರ  ಸೀಮಿತಗೊಳಿಸುವುದಿಲ್ಲ, ಪದವಿಯನ್ನು ಇತರ ಪಂಗಡಗಳಿಗೂ ಬಿಟ್ಟು ಕೊಡುವುದಿಲ್ಲ. ದೇವರ ಸತ್ಯ ಸಭೆ ಯಾರಾರಿಂದ ರಚಿಸಲ್ಪಟ್ಟಿದೆ. ತನ್ನನ್ನು ನಿಜವಾಗಿಯೂ ನಂಬುವವರಿಂದ ದೇವರನ್ನು ಅವರನ್ನು ತಿಳಿದಿದ್ದಾನೆ ಪ್ರಕಟನೆ 12:17 ಮತ್ತು ಅಧ್ಯಾಯ 12:14ರ ಪ್ರಕಾರ ಅಡ್ವೆಂಟಿಸ್ಟರು ಹೇಳಿಕೊಳ್ಳುವುದು; ಅವರೇ ದೇವರ ವಿಶೀಷ, ಸದೃಷ್ಯ, ಅಂತ್ಯ ಕಾಲದ ಶೇಷ ಸಭೆ. ಈ ಶೇಷ ಸಭೆ ಸ್ಥಳೀಯ ಹಾಗೂ ಸಾರ್ವತ್ರಿಕ ಹುಣ ಪಡೆದಿದೆ. ಪ್ರಕ 2:24; ಮತ್ತು 12:17. ಎಕ್ಕಾರ್ಡ ಮುಲ್ಲರ್.

ಚರ್ಚೆಯ ಪ್ರಶ್ನೆಗಳು:

1. ಯೇಸುವಿನ ಯೋಹಾನ 17ರಲ್ಲಿಯ ಪ್ರಾರ್ಥನೆ ಇಂದಿನ ನಮ್ಮ ಸಭೆಯಲ್ಲಿ ಈಡೇರುವದು ಪ್ರಾಮುಖ್ಯವಾಗಿದೆ ಯಾಕೆ? ಯೇಸು ಬಯಸಿದ ಮೊದಲನೇಯ ಶತಮಾನದ ಸಭೆಯಲ್ಲಿಯ ಐಕ್ಯತೆ ಇಂದಿನ ಸಭೆಯಲ್ಲಿಯೂ ಇರಬೇಕೆಂಬುದು ಯೇಸುವಿನ ಅಪೇಕ್ಷೆಯಾಗಿದೆ, ಇದರಲ್ಲಿ ಆತನ ಉದ್ದೇಶವೇನು?

2. ನಿಮ್ಮ ಸ್ಥಳೀಯ ಸಭೆ ಇತರ ಕ್ರೈಸ್ತರೊಡನೆ ಕೂಡಿ ಯಾವುದಾದರು ಕಾರ್ಯ ಕೈಗೊಂಡಿದೆಯೇ? ಅದು ಎಷ್ಟು ಯಶಸ್ವಿಯಾಗಿ ಫಲಿಸಿದೆ? ಹಾಗೆ ಮಾಡಲು ಸದಾಕಾಶಗಳಿರುವಾಗ ನೀವು ಹೊಂದಿರುವ ಸತ್ಯಗಳಲ್ಲಿ ರಾಜಿಯಾಗದೆ ಅವರೊಡನೆ ಹೇಗೆ ಕಾರ್ಯ ಸಾಧಿಸುವಿರಿ?

3. ಮಹಾಹೋರಾಟದಲ್ಲಿಯ ಕೆಳಗಿನ ವಾಕ್ಯಗಳು ನಮಗೆ ಉಪಯುಕ್ತ ಉಪದೇಶ ನೀಡುತ್ತವೆ? ಅವುಗಳಿಂದ ನಾವು ನಿಜ ಪ್ರಯೋಜನ ಪಡೆದುಕೊಳ್ಳುವುದು ಹೇಗೆ? ದೇವರ ಜನಾಂಗವೆಂದು ಕರೆಯಿಸಿ ಕೊಳ್ಳುವವರು ದೇವರ ವಾಕ್ಯಗಳು ಚೆಲ್ಲುವ ಬೆಳಕನ್ನು ಸ್ವೀಕರಿಸಿದರೆ ಕ್ರಿಸ್ತನ ಪ್ರಾರ್ಥನೆಗನುಗುಣವಾಗಿ ಅವರಲ್ಲಿ ಅನ್ಯೂನ್ಯತೆ, ಐಕ್ಯತೆ ಮೂಡುತ್ತದೆ, ಇದು ಅಪೋಸ್ತಲನು ಬಣ್ಣಿಸಿದಹಾಗೆ, ಸಮಾಧಾನದ ಬಂಧನದಲ್ಲಿ ಆತ್ಮನ ಐಕ್ಯತೆ ಇರುತ್ತದೆ, ಅಷ್ಟೇ ಅಲ್ಲ ಒಂದೇ ದೇಹ, ಒಂದೇ ಆತ್ಮ ಮತ್ತು ಒಂದೇ ನಿರೀಕ್ಷೆಗಾಗಿ ಕರೆಯಲ್ಪಟ್ಟಿದ್ದಿರಿ; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನ ದೀಕ್ಷೆ ಒಂದೇ, ಎಫೆಸದವರಿಗೆ 4:3–5, ಎಲ್ಲನ್ ಜಿ ವೈಟ್, ಮಹಾಹೋರಾಟ ಪು.379.

ಸಾರಾಂಶ: ಯೋಹಾನ 17ನೇ ಅಧ್ಯಾಯದಲ್ಲಿರುವ ಯೇಸುವಿನ ಮಹಾಯಜಕ ಪ್ರಾರ್ಥನೆಯೂ ಇಂದಿನ ಸಭೆಯಲ್ಲಿಯ ಐಕ್ಯತೆಯ ಪ್ರಾಮುಖ್ಯತೆಯ ಬಗ್ಗೆ ಯೇಸು ಅಂದೇ ಕಾಳಜಿ ಹೊಂದಿದ್ದನೆಂದು ನಮ್ಮ ಸ್ಮರಣೆಗೆ ತರುತ್ತದೆ. ಆತನ ಪ್ರಾರ್ಥನೆ ನಮ್ಮ ಪ್ರಾರ್ಥನೆಯಾಗಬೇಕು, ಆತನ ವಾಕ್ಯಗಳಲ್ಲಿ ಆಳವಾಗಿ ನೆಲೆಯೂರಲು ನಂಬಿಕೆ ಹೆಚ್ಚಲು ಮಾರ್ಗ ಹುಡುಕಬೇಕು. ಎಲ್ಲರೊಡನೆ ಇತರ ಕ್ರಿಸ್ತರೊಡನೆಯು ಕೂಡ ಮಧುರ ಸಂಬಂಧ ಹೊಂದಿರುವ ಸ್ಪೂರ್ತಿ ಪವಿತ್ರ ಪ್ರೀತಿಯಾಗಿರಬೇಕು.